ಮಧುಗಿರಿ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ
ನ್ಯಾಯಾಲಯದಲ್ಲಿ
ಓ.ಎಸ್. 376/2015

ವಾದಿಗಳು:– ವಿರುದ್ಧ ಪ್ರತಿವಾದಿಗಳು:–
ಗೋಪಾಲಪ್ಪ ಮತ್ತು ಇತರರು ಚಿಕ್ಕಮ್ಮ ಮತ್ತು ಇತರರು

**ವಾದಿಯ ಪರ ಸಾಕ್ಷಿದಾರರ ಮುಖ್ಯ ವಿಚಾರಣಾ ಪ್ರಮಾಣ ಪತ್ರ**

| | | |
|---|---|---|
| 1) | ಸಾಕ್ಷಿದಾರರ ಹೆಸರು | : ದೊಡ್ಡಲಿಂಗಯ್ಯ |
| 2) | ತಂದೆಯ ಹೆಸರು | : ಲಿಂಗಣ್ಣ |
| 3) | ವಯಸ್ಸು | : 47 ವರ್ಷ |
| 4) | ವೃತ್ತಿ | : ವ್ಯವಸಾಯ |
| 5) | ವಾಸ | : ಬಡಿಗೊಂಡನಹಳ್ಳಿ ಗ್ರಾಮ, ದೊಡ್ಡೇರಿ ಹೋಬಳಿ, ಮಧುಗಿರಿ ತಾಲ್ಲೂಕು. |

ಈ ಮೇಲ್ಕಂಡ ಸಾಕ್ಷಿದಾರನಾದ ನಾನು ಪ್ರಮಾಣ ಪೂರ್ವಕವಾಗಿ ಹೇಳುವುದೇನೆಂದರೆ,

ನಾನು ವಾದಿ ಮತ್ತು ಪ್ರತಿವಾದಿಯರನ್ನು ನೋಡಿರುತ್ತೇನೆ. ದಾವಾ ಸ್ವತ್ತನ್ನು ನೋಡಿರುತ್ತೇನೆ. ದಾವಾ ಸ್ವತನ್ನು ವಾದಿಯ ತಾಯಿ ಗಂಗಮ್ಮನವರು ಚಿಕ್ಕದೊಡ್ಡಯ್ಯನ ಮಗ ದೊಡ್ಡಲಿಂಗಪ್ಪ ಮತ್ತು ಚಿಕ್ಕಲಿಂಗಪ್ಪನ ಮಗ ಬಿ. ದೊಡ್ಡಲಿಂಗಯ್ಯನವರಿಂದ ದಿನಾಂಕ 14–05–1970 ಶುದ್ಧ ಕ್ರಯಕ್ಕೆ ಕೊಂಡಿರುತ್ತಾರೆ. ಅಂದಿನಿಂದ ವಾದಿಯ ತಾಯಿಯವರು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದರು. ಸದರಿ ಗಂಗಮ್ಮನವರ ಮರಣಾ ನಂತರ ಅವರ ವಾರಸುದಾರರಾಗಿ ಈ ಕೇಸಿನ ವಾದಿಗಳು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿರುತ್ತಾರೆ.

ಈ ಕೇಸಿನ ಪ್ರತಿವಾದಿಗಳಿಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು, ಅಧಿಕಾರ, ಸ್ವಾಧೀನ ಇರುವುದಿಲ್ಲ. ನಾನು ಅದೇ ಊರಿನವನಾದ್ದರಿಂದ ಮತ್ತು ದಾವಾ ಸ್ವತ್ತನ್ನು ನಾನು ನೋಡಿರುವುದರಿಂದ ನನಗೆ ಈ ವಿಚಾರ ಗೊತ್ತು.

ಈ ಮೇಲ್ಕಂಡ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ.

ಗುರುತು ಬಲ್ಲವರು,
B. Manohara BM
ವಕೀಲರು,
ಮಧುಗಿರಿ
ದಿನಾಂಕ:– 04/07/2026

ದೊಡ್ಡಲಿಂಗಯ್ಯ
ಪ್ರಮಾಣಕರ್ತರ ಸಹಿ.

NOTARY
B.A. ANNAPURNADEVI
MADHUGIRI
REVENUE TALUK
TUMAKURU DIST
LAW-LCL/36/2023
EXP 05/10/2028
GOVT OF KARNATAKA

SWORN TO BFORE ME
B.A.ANNAPURNADEVI, B.A., LL.B.
ADVOCATE & NOTARY
GOVT. OF KARNATAKA
Bus Stand Road,
MADHUGIRI - 572132
Tumkur Dist
4/7/2026

No. of Corrections:- Nil

ದಿನಾಂಕಃ **04.07.2026** ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಬಿ.ಎಂ.ಎಂ. ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳನ್ನು ತಿಳಿದುಕೊಂಡು ಸರಿ ಇರುತ್ತದೆಂದು ಎಂದು ಒಪ್ಪಿಸಹಿ ಮಾಡಿರುತ್ತೇನೆ.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್.ಹೆಚ್.ಎನ್. ವಕೀಲರಿಂದಃ

3 ನೇ ವಾದಿ ನನ್ನ ಮಾವ. ನಾನು 7 ನೇ ತರಗರತಿವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ಈ ದಾವೆಯನ್ನು ಯಾರು ಯಾರ ವಿರುದ್ಧ ಹೂಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ದಾವಾ ಸ್ವತ್ತು ಗಂಗಮ್ಮರವರಿಗೆ ಸೇರಿದಂತಹ ಸ್ವತ್ತು ಆಗಿರುತ್ತದೆ. ಗಂಗಮ್ಮರವರು ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತಾರೆ. ಸದರಿ ವಿಚಾರವನ್ನು ನನ್ನ ತಂದೆ ನನಗೆ ತಿಳಿಸಿರುತ್ತಾರೆ. ನಾನು 1979 ರಲ್ಲಿ ಜನಿಸಿರುತ್ತೇನೆ ಆದರೆ ದಿನಾಂಕ ನೆನಪಿರುವುದಿಲ್ಲ. ದಾವಾ ಸ್ವತ್ತು ಗಂಗಮ್ಮ ಖರೀದಿ ಮಾಡುವ ಪೂರ್ವದಲ್ಲಿ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ.

2. ದಾವಾ ಸ್ವತ್ತು ಮೂಲತಃ ನಾಗಮ್ಮರವರಿಗೆ ಸೇರಿದಂತಹ ಸ್ವತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತನ್ನು ನಾಗಮ್ಮನ ವಾರಸುದಾರರಿಂದ 1 ನೇ ಪ್ರತಿವಾದಿಯ ಗಂಡ ಗೋವಿಂದಪ್ಪ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತು ಕೋಟಗಾರಲಹಳ್ಳಿ ಗ್ರಾಮದ ಸರ್ವೆ.ನಂಬರ್.355/5 ರಲ್ಲಿ ಇರುತ್ತದೆ. ಕೋಟಗಾರಲಹಳ್ಳಿ ಬಡಿಗೊಂಡನಹಳ್ಳಿ ಗ್ರಾಮದಿಂದ 3 ಕಿ.ಮೀ ದೂರದಲ್ಲಿ ಇರುತ್ತದೆ. ಕೋಟಗಾರಲಹಳ್ಳಿ ಅಕ್ಕ ಪಕ್ಕದಲ್ಲಿ ನನಗೆ ಜಮೀನು ಇರುತ್ತದೆ. ದಾವಾ ಸ್ವತ್ತಿನಿಂದ ಅರ್ಧ ಕಿ.ಮೀ ದೂರದಲ್ಲಿ ನಮಗೆ ಸರ್ವೆ.ನಂಬರ್.299/4 ರಲ್ಲಿ ಜಮೀನು ಇರುತ್ತದೆ. ಸದರಿ ಜಮೀನು ಬಡಿಗೊಂಡನಹಳ್ಳಿ

04/7/2026

ಗ್ರಾಮದ ವ್ಯಾಪ್ತಿಯಲ್ಲಿ ಇರುತ್ತದೆ ಎಂದು ಉತ್ತರಿಸಿ ಮುಂದುವರೆದು ಸದರಿ ಸ್ವತ್ತು ಕೋಟಗಾರಲಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ ಇರುತ್ತದೆ ಎಂದು ಉತ್ತರಿಸುತ್ತಾರೆ.

3. ಕೋಟಗಾರಲಹಳ್ಳಿ ಗ್ರಾಮದ ದೊಡ್ಡಲಿಂಗಯ್ಯರವರ ಮಕ್ಕಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತು ಮೂಲತಃ ದೊಡ್ಡಲಿಂಗಯ್ಯನವರ ಕುಟುಂಬಕ್ಕೆ ಸೇರಿತ್ತು ಎಂದು ಸೂಚಿಸುವುದು ಸರಿಯಲ್ಲ. ದಿ:02.04.1975 ರಂದು ಬಿ. ಚಿಕ್ಕಲಿಂಗಪ್ಪರವರು ಅವರ ಕುಟುಂಬದಿಂದ ಪ್ರತ್ಯೇಕವಾದಾಗ ದಾವಾ ಸ್ವತ್ತು ಅವರ ಪಾಲಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತನ್ನು ದಿ:02.06.1975 ರಂದು ಬಿ.ಚಿಕ್ಕಲಿಂಗಪ್ಪ ಗೋವಿಂದಪ್ಪನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಕ್ರಯಪತ್ರದಂತೆ ಖಾತೆ ವರ್ಗಾವಣೆ ಮಾಡಿಸಿಕೊಂಡು ಗೋವಿಂದಪ್ಪ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದರು ಎಂದು ಸೂಚಿಸುವುದು ಸರಿಯಲ್ಲ. ಗೋವಿಂದಪ್ಪ ತೀರಿಕೊಂಡ ನಂತರ ದಾವಾ ಸ್ವತ್ತಿನ ಖಾತೆ 1 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

4. ದಾವಾ ಸ್ವತ್ತಿನ ಪೂರ್ವಕ್ಕೆ ವಾದಿ ಗಂಗಮ್ಮನವರ ಜಮೀನು, ಪಶ್ಚಿಮಕ್ಕೆ ಹಳ್ಳ, ಉತ್ತರಕ್ಕೆ ಗಂಗಮ್ಮನ ಜಮೀನು, ದಕ್ಷಿಣಕ್ಕೆ ಸರ್ಕಾರಿ ಹಳ್ಳ ಇರುತ್ತದೆ. ದಾವಾ ಸ್ವತ್ತಿನಲ್ಲಿ ಇಂದಿಗೂ ಗೋವಿಂದಪ್ಪನ ವಾರಸುದಾರರು ಸ್ವಾಧೀನದಲ್ಲಿ ಇರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಫ್ರಾಸಾ3 ರವರು ನನ್ನ ಮಾವ.

5. ದಾವಾ ಸ್ವತ್ತಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ವಾದಿಗಳು ನನ್ನ ಸಂಬಂಧಿಕರು ಆದ ಕಾರಣ ವಾದಿಗಳಿಗೆ ಸಹಾಯ ಮಾಡಲು

04/7/2026

ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತಿನ ಹತ್ತಿರ ಹೋಗಲು ನಿಮಗೆ ಯಾವುದೇ ಕೆಲಸ ಇರುವುದಿಲ್ಲ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ಅವರು ನಮ್ಮ ಸಂಬಂಧಿಕರು ಆದ ಕಾರಣ ಹೋಗಿ ಬರುತ್ತೇನೆ ಎಂದು ಉತ್ತರಿಸುತ್ತಾರೆ. ನಾನು ಸುಮಾರು 30-35 ವರ್ಷಗಳಿಂದ ದಾವಾ ಸ್ವತ್ತಿನ ಹತ್ತಿರ ಹೋಗಿಬರುತ್ತಿರುತ್ತೇನೆ. ಸುಮಾರು 5 ವರ್ಷಗಳ ಹಿಂದೆ ದಾವಾ ಸ್ವತ್ತಿನಲ್ಲಿ ರಾಗಿ ಬೆಳೆದಿದ್ದರು. ದಾವಾ ಸ್ವತ್ತಿನಲ್ಲಿ ತೆಂಗಿನ ಮರಗಳು ಇರುತ್ತವೆ. ದಾವಾ ಸ್ವತ್ತಿಗೆ ನೀರಿನ ಆಶ್ರಯ ಇರುವುದಿಲ್ಲ

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

04/7/2026

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ